## ಕಲ್ಪನೆ ಕಾವ್ಯ



# ಮನದ ಕೊಳೆಯು ಒಪ್ಪಗೊಳಿಸೋ...

ಸಾಯಕಲ್ಲಿಗದೋ ಜಳಕ
ಬಾಲರಿಗದೋ ಪುಳಕ

ಊರುಕೇರಿಯೆಲ್ಲಾ ಅಲೆದು
ಗದ್ದೆಪೈರು ಎಲ್ಲ ಮೆರೆದು
ಸಂದಿಗೊಂದಿ ಮೂಸಿ ಇಣಕಿ
ಬೇಡವೆನ್ನು ಕಡೆಯೂ ಹಣಕಿ

ಅಂಡಲೆದಿಹ ಗಾಲಿಗದೋ
ಇಂದು ಜಲದ ಮಜ್ಜನ
ಬೆಂಬಿಡದಿಹ ಕೊಳಚೆಗದೋ
ಇಂದೊದಗಿದೆ ವಿಮೋಚನ

ಮನವೂ ಒಂದು ಕೊಳಕು ಕಂತೆ
ಕೋಪತಾಪ ನಿಂದೆ ಸಂತೆ
ಲೋಭ ಮೋಹ ಈರ್ಷೆ ಮೂಟೆ
ಮರ್ಕಟವದು ಇಲ್ಲ ಸಟೆ

ತನುವ ತೊಳೆದೆ ತಿಕ್ಕಿ ಉಜ್ಜಿ
ಜಗಕೆ ಅಂದ ತೋರುವಂತೆ
ಮನದ ಕೊಳೆಯ ಒಪ್ಪ
ಗೊಳಿಸೋ ಮಾರಜನಕನೇ

**ಗುರುರಾಜ ಹ. ನಾಯಕ**

# ಕಾಲದ ದಾಳ

ತಿಳಿ ನೀರಿನಾಗ ತೊಳಿ ನನ್ನ ಮೈಯ
ಥಳ ಥಳ ಹೊಳೆವೆ ನಾನು
ಜಲಸ್ಫಟಿಕ ಮಣಿ ತೋರಣಗಟ್ಟಿ
ಶುಭಗೈ ಓಡುವೆ ನಾನು

ಕುದುರೆಯು ನಾನು ಭಾರಕ್ಕೆ ಕತ್ತೆ
ಕೂಲಿ ಇಲ್ಲದ ಬಾಳು
ದಣಿದರೂ ನೀವು ಅರಿಯೆನು ನಾನು
ಸದಾ ನಿಮ್ಮ ಆಳು

ಬಿಸಿಲಲ್ಲಿ ನಾನು ಮಳೆಯಲ್ಲೂ ನಾನು
ತಿರುಗುವೆನು ಊರು ಊರು
ಅಜ್ಜನ ಸಂಘ ಹೆಜ್ಜೇನಿನಂತೆ
ಮರೆಯುವೆನು ದಣಿವು ದೂರು

ಬೇಗನೆ ಹತ್ತಿ ಸುರಿಯುವ ಮುಗಿಲು
ತುಂಬೀತು ದಾರಿ ಕೆಸರು
ಎಚ್ಚರ ತಪ್ಪಿ ನಡೆದರೆ ಗೋಳು
ತಿಳಿಬೇಕು ಕಾಲದ ದಾಳ

ಹಗಲೆಂಬುದಿಲ್ಲಿ ಹಗುರಾಗಿ ಇಲ್ಲ
ಹೊಟ್ಟೆ ಹೊರೆವ ದಾರಿ
ಮೈಸುಟ್ಟು ಮಾಗಿ ಬಾಗಿದರೆ 'ಬೆಳಕು' ಕಲಿಬೇಕು
ಬಾರಿ ಬಾರಿ

**ವಾಯ್.ವ್ಹಿ. ಕಂಬಾರ, ಕಪ್ಪಲಿ**